**ದಿನಾಂಕಃ09.09.2025 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್.ಎಸ್., ವಕೀಲರಿಂದಃ–**

ನಾನು ಈ ಪ್ರಕರಣದಲ್ಲಿ ವಾದಿಯಾಗಿರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಈ ದಿನ ನಾನು ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಗೊಳಿಸಬೇಕೆಂದು ನಿವೇದಿಸಿಕೊಳ್ಳುತ್ತೇನೆ.

| ಕ್ರ.ಸಂಖ್ಯೆ | ದಾಖಲೆಗಳ ವಿವರ | ನಿಶಾನೆಗಳು |
|---|---|---|
| 1. | 1 ಮತ್ತು 2 ನೇ ತರಗತಿಯ ಶಾಲಾ ದಾಖಲಾತಿ ನಕಲುಗಳು | ನಿ.ಪಿ–1 ಮತ್ತು 2 |
| 2. | 4, 9 ಮತ್ತು 10 ನೇ ತರಗತಿಯ ಶಾಲಾ ದಾಖಲಾತಿ ನಕಲುಗಳು | ನಿ.ಪಿ–3 ರಿಂದ 5 |
| 3. | ಎಸ್.ಎಸ್.ಎಲ್.ಸಿ., ಅಂಕಪಟ್ಟಿಯ ನೋಟರಿಕೃತ ಪ್ರತಿ | ನಿ.ಪಿ–6 |
| 4. | ದ್ವಿತಿಯ ಪಿ.ಯು.ಸಿ., ಅಂಕಪಟ್ಟಿಯ ನೋಟರಿಕೃತ ಪ್ರತಿ | ನಿ.ಪಿ–7 |
| 5. | ಪ್ರಥಮ, ದ್ವಿತಿಯ ಮತ್ತು ತೃತೀಯ ವರ್ಷದ ಬಿ.ಎ. ಪದವಿ ವ್ಯಾಸಾಂಗದ ಅಂಕಪಟ್ಟಿಗಳ ನೋಟರಿಕೃತ ಪ್ರತಿಗಳು | ನಿ.ಪಿ–8 ರಿಂದ 10 |
| 6. | ನೇಮಕಾತಿ ಆದೇಶ | ನಿ.ಪಿ–11 |
| 7. | ಲೀಗಲ್ ನೋಟಿಸ್ ನ ಕಚೇರಿ ಪ್ರತಿ | ನಿ.ಪಿ–12 |
| 8. | 15 ಅಂಚೆ ರಸೀದಿಗಳು | ನಿ.ಪಿ–13 |
| 9. | 9 ಅಂಚೆ ಸ್ವೀಕೃತಿಗಳು | ನಿ.ಪಿ–14 |
| 10. | ಒಂದು ಅಂಚೆ ಲಕೋಟೆ ಮತ್ತು ಸ್ವೀಕೃತಿ | ನಿ.ಪಿ–15 |
| 11. | ನನ್ನ ಆಧಾರ್ ಕಾರ್ಡ್ ನ ನೋಟರೀಕೃತ ಪ್ರತಿ | ನಿ.ಪಿ–16 |
| 12. | ದಿನಾಂಕ.21.09.2024 ರ ಜಿಲ್ಲಾಧಿಕಾರಿ ಕಾರ್ಯಾಲಯದ ಪತ್ರ | ನಿ.ಪಿ–17 |

| | | |
|---|---|---|
| 13. | ದಿನಾಂಕ.03.10.2024 ರ ಜ್ಞಾಪಕ | ನಿ.ಪಿ–18 |
| 14. | ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ಚಿತ್ರದುರ್ಗ ಇವರ ಪತ್ರ | ನಿ.ಪಿ–19 |
| 15. | ದಿನಾಂಕ.12.09.2024 ರ ಬಿ.ಇ.ಒ., ಹೊಳಲ್ಕೆರೆ ಇವರ ಪತ್ರ | ನಿ.ಪಿ–20 |

(ನಿ.ಪಿ.6 ರಿಂದ 10 ಮತ್ತು 16 ರ ಮೂಲ ದಾಖಲೆಗಳನ್ನು ನೋಡಿ ಹಿಂತಿರುಗಿಸಲಾಯಿತು.)

**ಪಾಟೀ–ಸವಾಲುಃ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.